Lift Irrigation schemes in Mundargi and Shirahatti Taluks.

*Q.—639 **Sri C. S. HULKOTI** (Mundargi).—

Will the Government be pleased to state :—

(*a*)whether they have received any representations by the villagers of villages on the left bank of Tungabhadra River in Mundargi and Shirahatti taluks to have Lift Irrigation Schemes there ;

(*b*) if so, whether any survey has been made or started ;

(*c*) in which villages survey has been made ;

(*d*) whether they are aware that there is a great scope for lift irrigation in that area ?

A —**Sri VEERENDRA PATIL** (Minister for Public Works).—

(*a*) Yes. From the villagers of Hesrur and Bidarahalli in Mundargi Taluka.

(*b*) Preliminary investigation regarding Bidarahalli scheme is taken up. Survey work in respect of Hesrur was dropped as investigations revealed that the scheme is not feasible.

(*c*) No survey has been made for reasons given in reply to clause (*b*).

(*d*) Needs investigation.

ಶ್ರೀ ಸಿ. ಎಸ್. ಹುಲಕೋಟಿ.—ಬಿದರಹಳ್ಳಿ ಗ್ರಾಮದ ಫೈನಲ್ ಇನ್‌ವೆಸ್ಟಿಗೇಷನ್ ಯಾವಾಗ ಮುಗಿಯುತ್ತದೆ ಎಂಬುದನ್ನು ಹೇಳಲಿಕ್ಕೆ ಆಗುತ್ತದೆಯೇ ?

† ಶ್ರೀ ವೀರೇಂದ್ರ ಪಾಟೀಲ್.—ಇನ್‌ವೆಸ್ಟಿಗೇಷನ್‌ನ್ನು ಈಗ ತೆಗೆದುಕೊಂಡಿದ್ದಾರೆ.

ಶ್ರೀ ಸಿ. ಎಸ್. ಹುಲಕೋಟಿ.—ಹೆನರೂರಿನ ಇನ್‌ವೆಸ್ಟಿಗೇಷನ್ ಏಕೆ ಫೀಸಿಬಲ್ ಆಗಲಿಲ್ಲ ಎಂಬುದನ್ನು ಹೇಳಲಿಕ್ಕೆ ಆಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಎರಡೂವರೆ ಮೈಲಿಯವರೆಗೂ ನೀರನ್ನು ಪಂಪ್ ಮಾಡ ಬೇಕಾಗುತ್ತದೆ ; ಅದು ಬಹಳ ದುಬಾರಿ ಕೆಲಸವಾಗುತ್ತದೆ ; ಅದರ ರೆಕರಿಂಗ್ ಕಾಸ್ಟ್ ಹೆಚ್ಚಾಗುತ್ತದೆ ಎಂದು ಅದು ಫೀಸಿಬಲ್ ಅಲ್ಲ ಎಂದು ಹೇಳಿದ್ದಾರೆ.

ಶ್ರೀ ಸಿದ್ದಯ್ಯ ಕಾಶೀಮಠ.—ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳು ಮೇಲಿಂದ ಮೇಲೆ ಬರಗಾಲ ಪೀಡಿತ ಪ್ರದೇಶವಾಗಿರುವುದರಿಂದ ತುಂಗ ಭದ್ರಾ ಎಡದಂಡೆ ಕಾಲುವೆಯಿಂದ ಲಿಫ್ಟ್ ಇರಿಗೇಷನ್ ಮಾಡತಕ್ಕ ಯೋಜನೆಯನ್ನು ಕಾರ್ಯಗತ ಮಾಡಿ ನೀರಾವರಿ ಸೌಲಭ್ಯವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲೆಲ್ಲಿ ಫೀಸಿಬಲ್ ಆಗಿದೆಯೋ ಅಲ್ಲೆಲ್ಲಾ ಮಾಡಬಹುದು, ತುಂಗಭದ್ರಾ ಜಲಾಶಯದ ಕೆಳಗೆ ಇರತಕ್ಕ ಪ್ರದೇಶಕ್ಕೆ ನೀರು ಸಾಕಾದಷ್ಟು ಸಿಕ್ಕುವಂತೆ ನೋಡಿ ಕೊಳ್ಳಬೇಕಾಗುತ್ತದೆ. ಇದಕ್ಕೆಲ್ಲಾ ಒಂದು ಒಪ್ಪಂದ ಇದೆ ; ಅದು ತಮಗೆ ಗೊತ್ತಿದೆ. ನಮಗೂ ಆಂಧ್ರ ಪ್ರದೇಶಕ್ಕೂ ಒಂದು ಅಗ್ರಿಮೆಂಟ್ ಆಗಿದೆ ಅದಕ್ಕೆ ಯಾವ ತರಹದಿಂದಲೂ ಅಫೆಕ್ಟ್ ಆಗದಂತೆ ಎಷ್ಟು ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೋ ಅವುಗಳನ್ನೆಲ್ಲಾ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್. ಎಸ್. ಪಾಟೀಲ್.— ಲಿಫ್ಟ್ ನೀರಾವರಿ ಯೋಜನೆಯನ್ನು ಸಹಕಾರ ಸಂಘಗಳ ಮುಖಾಂತರ ಮಾಡಬೇಕೆಂಬ ಒಂದು ಪಾಲಿಸಿಯನ್ನು ನಿರ್ಧಾರ ಮಾಡಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಸರ್ಕಾರಿ ಕ್ಷೇತ್ರದಲ್ಲಿ ಮಾಡುವುದೇ ಉತ್ತಮ ಎಂದು ಅಭಿಪ್ರಾಯ ಇರುವುದರಿಂದ ಸಹಕಾರಿ ಸಂಘಗಳು ಮಾಡಬೇಕೆಂದು ಮುಂದೆ ಬಂದರೆ ಪ್ಲಾನ್ ಎಸ್ಟಿಮೇಟ್ ಮತ್ತು ಇನ್‌ವೆಸ್ಟಿಗೇಷನ್ ಮುಂತಾದುವನ್ನು ಮಾಡಲು ಏನು ಸಹಾಯ ಬೇಕೋ ಅದನ್ನು ಮಾಡಲು ಸರ್ಕಾರ ತಯಾರಿದೆ.

ಶ್ರೀ ಸಿ. ಎಸ್. ಹುಲಕೋಟಿ.—ಗಳಲಹಳ್ಳಿ, ಗಂಗಾ ಪುರ, ಶರಣಹಳ್ಳಿ ಈ ಎಲ್ಲಾ ಗ್ರಾಮ ಗಳಲ್ಲೂ ಇವರ ಅನಿವಾರ್ಯಕತೆ ಇದೆ. ಇವನ್ನೂ ಸಹ ಸರ್ವೆ ಮಾಡಿಸಲಾಗುತ್ತದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಇನ್‌ವೆಸ್ಟಿಗೇಷನ್ ಕೆಲಸವನ್ನು ತೆಗೆದುಕೊಂಡಿದ್ದಾರೆ ಇವುಗಳನ್ನೂ ಕೂಡ ಸರ್ವೆ ಮಾಡಿಸಬೇಕೆಂದು ಮಾನ್ಯ ಸದಸ್ಯರು ಸಲಹೆ ಕೊಟ್ಟರೆ ಮೈನರ್ ಇನ್‌ವೆಸ್ಟಿಗೇಷನ್ ಇರಿಗೇಷನ್ ಸರ್ಕಲ್ ಅವರಿಗೆ ಸರ್ವೆ ಮಾಡಿಸುತ್ತೇವೆ.

ಶ್ರೀ ಆರ್. ಎಸ್. ಪಾಟೀಲ್.—ಲಫ್ಟ್ ಇರಿಗೇಷನ್ ಸ್ಕೀಂಗಳನ್ನು ಮಾಡುವಾಗ ಸರ್ವೆ ಮಾಡುವುದು, ಪ್ಲಾನ್ ಎಸ್ಟಿಮೇಟ್ ಮಾಡುವುದು ಇದಕ್ಕೆಲ್ಲಾ ತಗಲತಕ್ಕ ವೆಚ್ಚವನ್ನು ಸಂಘದವರು ವಹಿಸಬೇಕೋ ಅಥವಾ ಸರ್ಕಾರದವರೇ ಆ ಖರ್ಚನ್ನು ವಹಿಸಿ ಮಾಡಿಸುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ (ಪಂಚಾಯತಿ ರಾಜ್, ಅಭಿವೃದ್ಧಿ ಮತ್ತು ಸಹಕಾರ ಶಾಖೆಗಳ ಮಂತ್ರಿಗಳು).—ಕೋ ಆಪರೇಟಿವ್ ಬೇಸಿಸ್ ಮೇಲೆ ಎಲ್ಲಿ ಮಾಡಬೇಕಾಗುತ್ತದೆಯೋ ಆ ಕೆಲಸವನ್ನು ಸರ್ಕಾರದ ವತಿಯಿಂದ ಮಾಡುತ್ತೇವೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಆ ರೀತಿ ಸಹಕಾರ ಪದ್ಧತಿಯಮೇಲೆ ಎಲ್ಲಾದರೂ ಬಾವಿ ತೋಡಿಸಿ ಪಂಪ್ ಸೆಟ್ ಹಾಕಿಸಿ ಕೊಟ್ಟಿದ್ದೀರಾ ? ಅದು ನಮರ್ಪಕವಾಗಿ ಕೆಲಸ ಮಾಡುತ್ತಾ ಇದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ನಮರ್ಪಕವಾಗಿ ಕೆಲಸ ಮಾಡುತ್ತಾ ಇದೆ.

Sri SANJEEVANATH AIKALA.—Is it the policy of the Government to entrust to co-operative societies the work of formation and execution of lift irrigation or only the operation of the lift irrigation scheme after its formation ?

Sri RAMAKRISHNA HEGDE.—Both can happen. In certain cases the whole thing was executed by the Department and later on it was handed over to the society and in certain cases lift irrigation society was first formed and then the work was executed under the supervision of departmental officers.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ನಮರ್ಪಕವಾಗಿ ಕೆಲಸ ಮಾಡುತ್ತಾ ಇದ್ದರೂ ಅದನ್ನು ಸರ್ಕಾರದವರು ವಹಿಸಿಕೊಳ್ಳುವುದು ಸೂಕ್ತ ಎಂದು ಲೋಕೋಪಯೋಗಿ ಶಾಖೆಯ ಮಂತ್ರಿಗಳು ಹೇಳಿದರು ; ಆ ರೀತಿ ವಹಿಸಿಕೊಳ್ಳಬೇಕಾದ ಅವಶ್ಯಕತೆ ಏನಿದೆ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಆ ರೀತಿ ಹೇಳಲಿಲ್ಲ.

ಶ್ರೀ ಆರ್. ಎಸ್. ಪಾಟೀಲ್.—ಸಹಕಾರ ಸಂಘಗಳ ಮೂಲಕ ಮಾಡಿದರೆ ಕೆಲವೊಂದು ಕನ್‌ಸೆಷನ್‌ಗಳನ್ನು ಕೊಡುತ್ತೇವೆ ಎಂದು ಹೇಳಿದಿರಿ ಅವು ಎಂತಹವು ಎಂಬುದನ್ನು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದರ ಬಗ್ಗೆ ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಹೇಳಬಹುದು.

ಶ್ರೀ ಸಿ ಎಸ್. ಹುಲಕೋಟಿ.—ಈ ಕ್ಷೇತ್ರ ಬರಗಾಲದ ಪ್ರದೇಶ ಆದುದರಿಂದ ಲಫ್ಟ್ ಇರಿಗೇಷನ್‌ನ ಅವಶ್ಯಕತೆ ಬಹಳವಾಗಿದೆ ಆದ ಕಾರಣ ಇದಕ್ಕೆ ತೀವ್ರ ಗಮನವನ್ನು ಕೊಡಲಾಗುತ್ತದೆಯೇ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಹೌದು.

Sri SANJEEVANATH AIKALA.—A very good scheme was investigated and prepared in the Speaker's constituency. Why was it not taken up though it was very fine and good ?

Mr. SPEAKER.—The question is disallowed.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸಹಕಾರ ಸಂಘಗಳಿಂದ ನಡೆಸಲ್ಪಟ್ಟ ಮೈಸೂರು ರಾಜ್ಯದ ಲಫ್ಟ್ ಇರಿಗೇಷನ್ ಸೊಸೈಟಿಯಾವುದು ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅದು ಈ ಪ್ರಶ್ನೆಯ ಉಪಪ್ರಶ್ನೆಯಾಗುವುದಿಲ್ಲ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಸಹಕಾರ ತತ್ವದ ಮೇಲೆ ನೀರಾವರಿ ಕೆಲಸಗಳನ್ನು ಮಾಡತಕ್ಕಂತಹ ಎಷ್ಟು ಸೊಸೈಟಿಗಳನ್ನು ತಾವು ನಡೆಸುತ್ತಾ ಇದ್ದೀರಿ ? ಅದರಲ್ಲಿ ತಮ್ಮ ಅನುಭವವನ್ನು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗ್ಗಡೆ.—ಅವರ ಜಿಲ್ಲೆಯಲ್ಲಿ ಹೊಳೇನರಸೀಪುರದಲ್ಲಿ ಕೆಲಸ ಹೇಗೆ ನಡೆದಿದೆ ಎಂಬುದನ್ನು ಅವರು ನೋಡಬೇಕು.